**ಕರ್ನಾಟಕ ವಿಧಾನಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹನ್ನೆರಡನೇ ಅಧಿವೇಶನ**

# ಕರ್ನಾಟಕ ಸೌಹಾರ್ದ ಸಹಕಾರಿ (ಎರಡನೇ ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ-43)**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು (2000ರ ಕರ್ನಾಟಕ ಅಧಿನಿಯಮ 17) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸೌಹಾರ್ದ ಸಹಕಾರಿ (ಎರಡನೇ ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 10ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ (2000ರ ಕರ್ನಾಟಕ ಅಧಿನಿಯಮ 17) 10ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ (xxi)ನೇ ಖಂಡದಲ್ಲಿ (ಎ) ಉಪಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎ-ಎ) ಸಹಕಾರ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಪ್ರಾಯೋಜಿಸಿರುವ ಮತ್ತು ಕರ್ನಾಟಕ ಸೊಸೈಟಿಗಳ ಅಧಿನಿಯಮ, 1960ರ ಅಡಿಯಲ್ಲಿ ನೋಂದಾಯಿಸಿದ ಸಹಕಾರ ಅಕಾಡೆಮಿ (ನೋಂ), ಮೈಸೂರು ಇದಕ್ಕೆ ಶೇಕಡ 0.50"

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸಹಕಾರ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಪ್ರಾಯೋಜಿಸಿರುವ ಮತ್ತು ಕರ್ನಾಟಕ ಸೊಸೈಟಿಗಳ ಅಧಿನಿಯಮ, 1960ರ ಅಡಿಯಲ್ಲಿ ನೋಂದಾಯಿಸಿದ ಸಹಕಾರ ಅಕಾಡೆಮಿ (ನೋಂ), ಮೈಸೂರು ಇದಕ್ಕೆ ಪ್ರತಿಯೊಂದು ಸೌಹಾರ್ದ ಸಹಕಾರಿಯ ನಿವ್ವಳ ಲಾಭದ ಮೊತ್ತದಲ್ಲಿ ಶೇಕಡ 0.50ನ್ನು ವಿನಿಯೋಗಿಸಲು ಉಪಬಂಧವನ್ನು ಕಲ್ಪಿಸುವುದಕ್ಕೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು(2000ರ ಕರ್ನಾಟಕ ಅಧಿನಿಯಮ 17) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಿದೆ.

ಆದ್ದರಿಂದ, ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಹೆಚ್.ಎಸ್. ಮಹದೇವ ಪ್ರಸಾದ್**
ಸಹಕಾರ ಮತ್ತು ಸಕ್ಕರೆ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ.

## ಅನುಬಂಧ

**ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ (2000ರ ಕರ್ನಾಟಕ ಅಧಿನಿಯಮ ಸಂಖ್ಯೆ 17) ಉದ್ಧೃತ ಭಾಗ**

**xxx xxx xxx**

**10. ಉಪವಿಧಿಗಳು.-** (1) **xxx xxx xxx**

(2) ಪ್ರತಿಯೊಂದು ಸಹಕಾರಿಯ ಉಪವಿಧಿಗಳು ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸತಕ್ಕದ್ದು, ಎಂದರೆ:-

(i) ಸಹಕಾರಿಯ ಹೆಸರು, ವಿಳಾಸ ಮತ್ತು ಕಾರ್ಯಾಚರಣೆಯ ಪ್ರದೇಶ;

**xxx xxx xxx**

(xxi) ನಿವ್ವಳ ಲಾಭದಲ್ಲಿ ಮುಖ್ಯವಾಗಿ ಈ ಮುಂದಿನವುಗಳ ಬಗ್ಗೆ ಹಣದ ವಿನಿಯೋಗ,-

(ಎ) ಸಹಕಾರಿಯು ರಚಿಸಿದ ಮೀಸಲು ನಿಧಿಗೆ ಶೇಕಡ ಇಪ್ಪತ್ತೈದು;

**xxx xxx xxx**

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ ಘಟಕ, ಬೆಳಗಾವಿ, ಪಿ7, ಕಾಸೂ , 1000-ಪ್ರತಿಗಳು 30ನೇ ನವೆಂಬರ್, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**TWELFTH SESSION**

# THE KARNATAKA SOUHARDA SAHAKARI (SECOND AMENDMENT) BILL, 2016

**(L.A. Bill No. 43 of 2016)**

A Bill further to amend the Karnataka Souharda Sahakari Act, 1997.

Whereas, it is expedient further to amend the Karnataka Souharda Sahakari Act, 1997 (Karnataka Act 17 of 2000);

Be it enacted by the Karnataka State legislature in the sixty seventh year of the republic of India, as follows:-

**1. Short title and Commencement.**- (1) This Act may be called the Karnataka Souharda Sahakari (Second Amendment) Act, 2016.

(2) It shall come into force at once.

**2. Amendment of section 10.-** In the Karnataka Souharda Sahakari Act, 1997 (Karnataka Act 17 of 2000) in section 10, in sub-section (2), in clause (xxi), after sub-clause (a), the following shall be inserted, namely:-

"(a-a) 0.50 percent towards the Sahakara Academy (Reg), Mysore, registered under the Karnataka Societies Registration Act, 1960 and sponsored by the State Government for the purpose of carrying out Co-operative education, training and research."

## STATEMENT OF OBJECTS AND REASONS

It is considered necessary to amend the Karnataka Souharda Sahakari Act, 1997 (Karnataka Act 17 of 2000) to make a provision for appropriation of 0.50 percent of amount out of the net profit of every Co-operative towards the Sahakara Academy (Reg), Mysore, registered under the Karnataka Societies Registration Act, 1960 and sponsored by the State Government for the purpose of carrying out Co-operative education, training and research.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**H.S. MAHADEVA PRASAD**
Minister for Co-operation and Sugar

**S.Murthy**
Secretary (I/C)
Karnataka Legislative Assembly.

**ANNEXURE**

**EXTRACT FROM THE KARNATAKA SOUHARDA SAHAKARI ACT, 1997 (KARNATAKA ACT 17 OF 2000)**

**XX X XXX**

**10. Bye-laws.- (1) XX XX XX**

(2) The bye-laws of every Co-operative shall provide for the following matters, namely:-

(i) the name, address and area of operation of the Co-operative;

**XX XX XX**

(xxi) appropriation of amount out of the net profit specifically for the following:-

(a) twenty five percent towards the reserve fund constituted by the co-operative;

**XX XX XX**

Government Press, Suvarna Soudha Unit, Belgavi, 30th November 2016 P7, W.D., Copies 1000